ಸಂ:ಇಎಕ್ಸ್ಇ/ಚಿಪುರ/ನೇಮಕಾತಿ/ವಾಚಾ/24/2015–16.

ಜಿಲ್ಲಾಧಿಕಾರಿಗಳ ಕಛೇರಿ
ಚಿಕ್ಕಬಳ್ಳಾಪುರ ಜಿಲ್ಲೆ,
ಚಿಕ್ಕಬಳ್ಳಾಪುರ, ದಿನಾಂಕ: 12/12/2019.

## : : ಅಧಿಕೃತ ಜ್ಞಾಪನ : :

ವಿಷಯ:– ಚಿಕ್ಕಬಳ್ಳಾಪುರ ಜಿಲ್ಲಾ ಅಬಕಾರಿ ಇಲಾಖೆಗೆ ಹಂಚಿಕೆಯಾಗಿರುವ ಮೂರು ವಾಹನ ಚಾಲಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:– 1) ಸರ್ಕಾರದ ಆದೇಶ ಸಂ:ಎಫ್‌ಡಿ/31/ಇಎಪಿಎಸ್/1999, ದಿನಾಂಕ:03/06/1999.

2) ಅಬಕಾರಿ ಆಯುಕ್ತರು, ಬೆಂಗಳೂರು ರವರ ಪತ್ರ ಸಂ:ಇಸಿಇ/32/ವಾಚಾ/ನೇಮಕಾತಿ/2008, ದಿ:17/11/2011.

3) ಜಿಲ್ಲಾಧಿಕಾರಿಗಳು ಹಾಗೂ ಅಬಕಾರಿ ವಾಹನ ಚಾಲಕರ ನೇಮಕಾತಿ ಆಯ್ಕೆ ಸಮಿತಿ ಅಧ್ಯಕ್ಷರು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಅಧಿಸೂಚನೆ ಸಂ:19/05/2016.

4) ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂ:ಇಎಕ್ಸ್ಇ/ ಚಿಪುರ/ನೇಮಕಾತಿ/ವಾಚಾ/24/2015–16, ದಿ:15/10/2019.

5) ಪೊಲೀಸ್ ಅಧೀಕ್ಷಕರು, ಪೊಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆ, ಯಲಹಂಕ, ಬೆಂಗಳೂರು ರವರ ಪತ್ರ ಸಂ:ಸಿಬ್ಬಂದಿ/13/ಪಿಡಿಎಂಎಸ್/2017–18, ದಿನಾಂಕ:11/11/2019 ಮತ್ತು 05/12/2019.

* * * *

ಚಿಕ್ಕಬಳ್ಳಾಪುರ ಜಿಲ್ಲಾ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 03 ವಾಹನ ಚಾಲಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಸರ್ಕಾರ ಉಲ್ಲೇಖ (1) ರಂತೆ ಅನುಮತಿ ನೀಡಿರುತ್ತದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಉಲ್ಲೇಖ (3) ರಂತೆ ಅಧಿಸೂಚನೆ ಹೊರಡಿಸಿ ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ನಿಗಧಿಯಾದ ಕೊನೆಯ ದಿನಾಂಕಕ್ಕೆ 96 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಸ್ವೀಕೃತಗೊಂಡ 96 ಅರ್ಜಿಗಳಲ್ಲಿ ಅರ್ಹಗೊಂಡ 26 ಅಭ್ಯರ್ಥಿಗಳ ಪೈಕಿ 1:5 ರ ಅನುಪಾತದಲ್ಲಿ 16 ಅರ್ಹ ಅಭ್ಯರ್ಥಿಗಳಿಗೆ ದಿನಾಂಕ:28/02/2018, 01/03/2018, 28/08/2019 ಮತ್ತು 04/09/2019 ರಂದು ಮೂಲ ದಾಖಲಾತಿಗಳ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. 16 ಅಭ್ಯರ್ಥಿಗಳ ಪೈಕಿ 05 ಅಭ್ಯರ್ಥಿಗಳು ಗೈರು ಹಾಜರಾಗಿರುತ್ತಾರೆ. ಉಳಿದ 11 ಅಭ್ಯರ್ಥಿಗಳಿಂದ ಪಡೆದ ದಾಖಲಾತಿಗಳಲ್ಲಿ 7ನೇ ತರಗತಿಯ ಅಂಕಪಟ್ಟಿಯ ನೈಜತೆ ದೃಢೀಕರಣಕ್ಕಾಗಿ ಸಂಬಂಧಪಟ್ಟ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಗೆ ಪತ್ರ ಬರೆದು ನೈಜತೆ ಬಗ್ಗೆ ದೃಢೀಕರಣ ಪಡೆಯಲಾಗಿರುತ್ತದೆ.

ಈ 1:5 ಅನುಪಾತದಲ್ಲಿ ವೈದ್ಯಕೀಯ / ದೇಹದಾರ್ಢ್ಯತೆ ಮತ್ತು ಚಾಲನೆಯಲ್ಲಿ ಅರ್ಹಗೊಂಡಿರುವ ಅಭ್ಯರ್ಥಿಗಳ ಪೈಕಿ 7ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಮೆರಿಟ್ ಆಧಾರದ ಮೇಲೆ ಪ್ರವರ್ಗವಾರು 1:3 ರ ಅನುಪಾತದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈ ಕಛೇರಿ ಉಲ್ಲೇಖಿತ (4) ರಂತೆ ಹೊರಡಿಸಿ, ತಾತ್ಕಾಲಿಕ ಆಯ್ಕೆ ಪಟ್ಟಿ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಲಿಖಿತವಾಗಿ ಸಮರ್ಥನೀಯ ದಾಖಲೆಗಳೊಂದಿಗೆ ದಿನಾಂಕ:22/10/2019 ರ ಒಳಗಾಗಿ ಈ ಕಛೇರಿಗೆ ಸಲ್ಲಿಸಲು ಕಾಲಾವಕಾಶ ಕಲ್ಪಿಸಲಾಗಿರುತ್ತದೆ.

ಅದರಂತೆ ನಿಗಧಿತ ಅವಧಿಯೊಳಗೆ 03 ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಸದರಿ ಆಕ್ಷೇಪಣೆಗಳು ಸಮಂಜಸವಾಗಿಲ್ಲದ ಕಾರಣ, ಸಂಬಂಧಪಟ್ಟವರಿಗೆ ಹಿಂಬರಹವನ್ನು ನೀಡಿ, ಆಕ್ಷೇಪಣೆಗಳನ್ನು ತಿರಸ್ಕರಿಸಲಾಗಿರುತ್ತದೆ.

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಪ್ರವರ್ಗವಾರು ಕ್ರಮಸಂಖ್ಯೆ 1 ರ ಕ್ರಮಾಂಕದ ಅಭ್ಯರ್ಥಿಗಳನ್ನು ಪೊಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆ, ಯಲಹಂಕ ಇಲ್ಲಿರುವ ತರಬೇತಿ ಶಾಲೆಯಲ್ಲಿ ವಾಹನ ಚಾಲನೆ ನೈಪುಣ್ಯತೆ ಪರೀಕ್ಷೆಗೆ ನಿಯೋಜಿಸಿ, ಸದರಿ ಅಭ್ಯರ್ಥಿಗಳ ವಾಹನ ಚಾಲನಾ ನೈಪುಣ್ಯತೆ ಪರೀಕ್ಷೆಯನ್ನು ನಡೆಸಿ ಪರೀಕ್ಷಾ ಪ್ರಮಾಣ ಪತ್ರವನ್ನು ಈ ಕಛೇರಿಗೆ ಕಳುಹಿಸಿಕೊಡಲು ಕೋರಲಾಗಿರುತ್ತದೆ. ಅದರಂತೆ, ಪೊಲೀಸ್ ಅಧೀಕ್ಷಕರು, ಪೊಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆ, ಯಲಹಂಕ, ಬೆಂಗಳೂರು ರವರ ಉಲ್ಲೇಖಿತ (5) ರ ದಿನಾಂಕ:11/11/2019 ರ ಫಲಿತಾಂಶ ಪಟ್ಟಿಯಲ್ಲಿ ತಾತ್ಕಾಲಿಕ ಪಟ್ಟಿಯಲ್ಲಿನ ಪರಿಶಿಷ್ಟ ಜಾತಿ, ಸಾಮಾನ್ಯ ವರ್ಗದ ಅಭ್ಯರ್ಥಿಗಳು ಉತ್ತೀರ್ಣರಾಗಿದ್ದು, ಪರಿಶಿಷ್ಟ ಪಂಗಡದ ಕ್ರಮ ಸಂಖ್ಯೆ 01 ರ ಅಭ್ಯರ್ಥಿಯಾದ ಶ್ರೀ ಕೆ.ವಿ. ವಿಜಯನಾಯಕ್ ಬಿನ್ ವೆಂಕಟರಾಮು ಅನುತ್ತೀರ್ಣವಾಗಿರುವುದಾಗಿ ಫಲಿತಾಂಶ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಪಂಗಡದ ತಾತ್ಕಾಲಿಕ ಪಟ್ಟಿಯಲ್ಲಿನ ಕ್ರಮ ಸಂಖ್ಯೆ 02 ರ ಅಭ್ಯರ್ಥಿಯಾದ ಕೌಶಿಕ್ ಬಿ. ಬಿನ್ ಬಿಳಿಗಿರಿ, ರವರನ್ನು ಪೊಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆಯ ಚಾಲನಾ ಪರೀಕ್ಷೆಗೆ ನಿಯೋಜಿಸಿ, ಸದರಿ ಅಭ್ಯರ್ಥಿಯ ವಾಹನ ಚಾಲನಾ ನೈಪುಣ್ಯತೆ ಪರೀಕ್ಷೆಯನ್ನು ನಡೆಸಿ ಪರೀಕ್ಷಾ ಪ್ರಮಾಣ ಪತ್ರವನ್ನು ಈ ಕಛೇರಿಗೆ ಕಳುಹಿಸಿಕೊಡಲು ಕೋರಲಾಗಿರುತ್ತದೆ. ಅದರಂತೆ, ಪೊಲೀಸ್ ಅಧೀಕ್ಷಕರು, ಪೊಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆ, ಯಲಹಂಕ, ಬೆಂಗಳೂರು ರವರ ಉಲ್ಲೇಖಿತ (5) ರ ದಿನಾಂಕ:05/12/2019 ರ ಫಲಿತಾಂಶ ಪಟ್ಟಿಯಲ್ಲಿ ಸದರಿ ಅಭ್ಯರ್ಥಿಯು ಉತ್ತೀರ್ಣರಾಗಿರುವ ಬಗ್ಗೆ ಫಲಿತಾಂಶ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಆದುದರಿಂದ ಉಲ್ಲೇಖಿತ (4) ರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ವಯ ಪೊಲೀಸ್ ಅಧೀಕ್ಷಕರು, ಪೊಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆ, ಯಲಹಂಕ, ಬೆಂಗಳೂರು ರವರು ನಡೆಸಿದ ವಾಹನ ಚಾಲನಾ ನೈಪುಣ್ಯತೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಅನುಬಂಧದಲ್ಲಿ ವಿವರಿಸಿರುವಂತೆ ಪ್ರಕಟಿಸಿದೆ.

R. [signature]

ಅಬಕಾರಿ ವಾಹನ ಚಾಲಕರ ನೇಮಕಾತಿ
ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ರವರಿಗೆ:-

1. ಕಛೇರಿಯ ಪ್ರಕಟಣಾ ಫಲಕಕ್ಕೆ.
2. District Informatics Office (NIC), ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಜಿಲ್ಲಾ ವೆಬ್ ಸೈಟ್ ನಲ್ಲಿ ಅಪ್‌ಲೋಡ್ ಮಾಡಲು ಕೋರಿದೆ.
3. ಸದಸ್ಯ ಕಾರ್ಯದರ್ಶಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಅಬಕಾರಿ ಜಂಟಿ ಆಯುಕ್ತರು, ಜಾರಿ ಮತ್ತು ತನಿಖೆ, ಬೆಂಗಳೂರು ವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.

## -:ಅನುಬಂಧ:-

## ಅಂತಿಮ ಆಯ್ಕೆ ಪಟ್ಟಿ

ಮಾನ್ಯ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ಪತ್ರ ಸಂ:ಇಸಿಇ/32/ ವಾಚಾ/ನೇಮಕಾತಿ/2008, ದಿನಾಂಕ:17/11/2011 ರ ಆದೇಶದಂತೆ ಚಿಕ್ಕಬಳ್ಳಾಪುರ ಜಿಲ್ಲೆಗೆ ಹಂಚಿಕೆಯಾಗಿರುವ 03 ವಾಹನ ಚಾಲಕರ ನೇರ ನೇಮಕಾತಿಯ ಅಂತಿಮ ಆಯ್ಕೆ ಪಟ್ಟಿಯ ಪ್ರವರ್ಗವಾರು ವಿವರ.

| ಕ್ರ. ಸಂ. | ಅರ್ಜಿ ಸಂಖ್ಯೆ | ಅಭ್ಯರ್ಥಿಯ ಹೆಸರು ವಿಳಾಸ | ಮೀಸಲಾತಿ ವರ್ಗೀಕರಣ | 07ನೇ ತರಗತಿ ಅಂಕಗಳು ಶೇ. | ಪಿ.ಡಿ.ಎಂ.ಎಸ್. ವಾಹನಾ ಚಾಲನಾ ಪರೀಕ್ಷೆ | ಸಂಚಿತ ಫಲಿತಾಂಶ |
|---|---|---|---|---|---|---|
| **ಪರಿಶಿಷ್ಟ ಜಾತಿ : ಹುದ್ದೆ – 01** | | | | | | |
| 01 | 0186 | ಎಲ್.ಎಸ್. ಸುಬ್ರಮಣಿ ಬಿನ್ ಸೊಂಬಣ್ಣ, ಲಕ್ಕೊಂಡಹಳ್ಳಿ ಗ್ರಾಮ & ಅಂಚೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | ಪರಿಶಿಷ್ಟ ಜಾತಿ | 59.45 | ಅರ್ಹ | ಅರ್ಹ |
| **ಪರಿಶಿಷ್ಟ ಪಂಗಡ : ಹುದ್ದೆ – 01** | | | | | | |
| 02 | 047 | ಕೌಶಿಕ್ ಬಿ. ಬಿನ್ ಬಿಳಿಗಿರಿ, #11/304, ಎಂ.ಎಂ. ರಸ್ತೆ, ಕೆಳಗಾಲ ಕೇರಿ, ವಾರ್ಡ್ ನಂ;11, ಬನ್ನೂರು ಗ್ರಾಮ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. | ಪರಿಶಿಷ್ಟ ಪಂಗಡ | 80.33 | ಅರ್ಹ | ಅರ್ಹ |
| **ಸಾಮಾನ್ಯ ವರ್ಗ : ಹುದ್ದೆ – 01** | | | | | | |
| 01 | 0010 | ಎನ್. ಮಹೇಶ್ ಬಿನ್ ನರಸಿಂಹಯ್ಯ, 1ನೇ ಬ್ಲಾಕ್, ಗೂಳೂರು ರಸ್ತೆ, ಚೌಡಪ್ಪ ಮನೆ ಹತ್ತಿರ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. | ಸಾಮಾನ್ಯ ವರ್ಗ (ಪರಿಶಿಷ್ಟ ಜಾತಿ) | 95.60 | ಅರ್ಹ | ಅರ್ಹ |

ಅಬಕಾರಿ ವಾಹನ ಚಾಲಕರ ನೇಮಕಾತಿ
ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ದಿನಾಂಕ: 12 /12/2019.

ಸ್ಥಳ: ಚಿಕ್ಕಬಳ್ಳಾಪುರ.